## ಪಾಠ 15

## ಸಭೆ:

# ಅದರ ಹಿರಿಯರು, ಅವರ ಕರ್ತವ್ಯಗಳು

**ಸ್ವಯಂ – ಶಿಸ್ತು ಪಾಲನೆ**

1. **"ಎಚ್ಚರಿಕೆಯಾಗಿರಿ" ಎಂದೂ ಪೌಲನು ಯಾರಿಗೆ ಹೇಳಿದನು (ಅಪೊಸ್ತಲರ ಕೃತ್ಯಗಳು 20:28)?**
   a. 2 ಕೊರಿಂಥ 13:5ರಲ್ಲಿ ಈ ತತ್ವವು ಹೇಗೆ ಹೇಳಲ್ಪಟ್ಟಿದೆ?
   b. ಇತರರನ್ನು ರಕ್ಷಿಸುವ ಮೊದಲು ಯಾವ ಎರಡು ಸಂಗತಿಗಳು ಮಾಡಲ್ಪಡಬೇಕು (1 ತಿಮೊಥೆ 4:16)?
   c. ಯಾರ ಮನೆಯು ಮೊದಲು ಆಳಲ್ಪಡಬೇಕು (1 ತಿಮೊಥೆ 3:4, 5)?

**ಇತರರ ಮೇಲೆ ಕಾವಲು ಕಾಯುವುದು – ಸಭೆ**

1. **ಈ ಕಾವಲು ಕಾಯುವವರು ಯಾರಿಗೆ ವಿಸ್ತರಿಸಬೇಕು (ಅಪೊಸ್ತಲರ ಕೃತ್ಯಗಳು 20:28)?**
   a. ಸಭೆಯು "ಮಂದೆಯಾಗಿದ್ದರೆ" ಹಿರಯರು ಏನಾಗಿದ್ದಾರೆ?
   b. ದೇವರ ಮನೆಯಲ್ಲಿ ಎರಡು ರೀತಿಯ ಕುರುಬರ ಬಗ್ಗೆ ಹೇಳಿರಿ (1 ಪೇತ್ರ 5:4)?
2. **1 ಪೇತ್ರ 5:2ರಲ್ಲಿ ಮೊದಲನೆಯ ಭಾಗವು ಕಾವಲು ಕಾಯುವದರಲ್ಲಿ ಮುಂದಿನ ಹೆಜ್ಜೆಯನ್ನು ಹೇಳುತ್ತದೆ. ಅದು ಏನಾಗಿರುತ್ತದೆ?**
   a. "ದೇವರ ಮಂದೆಯನ್ನು ಕಾಯಿರಿ" ಎಂದರೆ ಅರ್ಥವೇನು?
   b. "ದೇವರ ಮಂದೆಯನ್ನು ಕಾಯುವದರಲ್ಲಿ" ಒಳಗೊಂಡಿರುವ ಆರು ಸಂಗತಿಗಳನ್ನು ಹೇಳಿರಿ (1 ಥೆಸಲೊನೀಕ 5:14, 15).
3. **ಹಿರಿಯರು ಯಾವುದರ ಪರವಾಗಿ "ಕಾವಲು" ಕಾಯಬೇಕು (ಇಬ್ರಿಯ 13:17)?**
   a. ಅವರು ಹೀಗೆ ಯಾಕೆ ಕಾಯಬೇಕು? ಎರಡು ಕಾರಣಗಳನ್ನು ಕೊಡಿರಿ (ಇಬ್ರಿಯ 13:17).
   b. ಹಿರಿಯರು ಮಂದೆಯನ್ನು ತಿಳಿದು ಕೊಳ್ಳಬಾರದೋ? ಅವು ಎಷ್ಟು ಇವೆ? ಅವರು ಯಾರು ಎಂಬುದನ್ನು ಅವರು ತಿಳಿದುಕೊಳ್ಳಬಾರದೋ? ಅವರು ಹೇಗೆ ಜೀವಿಸುವರು? ಅವರು ಎಲ್ಲಿ ಜೀವಿಸುವರು?
   c. ಪುರಾತನ ಕುರುಬರು ತಮ್ಮ ಕುರಿಹಿಂಡುಗಳನ್ನು ಎಷ್ಟು ಚೆನ್ನಾಗಿ ತಿಳಿದು ಕೊಂಡಿದ್ದರು (ಯೋಹಾನ 10:3)? ಅದಕ್ಕೆ ಪ್ರತಿಯಾಗಿ ಕುರಿಯು ಕುರುಬನನ್ನು ಎಷ್ಟು ಚೆನ್ನಾಗಿ ತಿಳಿದಿತ್ತು (ಯೋಹಾನ 10:4, 5)?

**ಆತ್ಮಿಕ ಆಹಾರದ ಆಡಳಿತೆಗಾರರು**

1. **ದೇವರ ಮಂದೆಯನ್ನು ಹಿರಿಯರು ಹೇಗೆ ಪೋಷಿಸಬೇಕು (ಅಪೊಸ್ತಲರ ಕೃತ್ಯಗಳು 20:28)?**
   a. ಕ್ರಿಸ್ತನಲ್ಲಿ ಶಿಶುಗಳಿಗೆ ಏನು ಕೊಡಲ್ಪಡಬೇಕು (1 ಪೇತ್ರ 2:2)? ಯಾಕೆ ಅವರಿಗೆ ಹೀಗೆ ಕೊಡಲ್ಪಡಬೇಕು (ಇಬ್ರಿಯ 5:13)? ಕೊರಿಂಥದ ಕೆಲವರಿಗೆ

ಪೌಲನು ಯಾಕೆ ಹೀಗೆ ಉಣ್ಣಿಸಿದನು (1 ಕೊರಿಂಥ 3:2, 3)?

b. ಪ್ರಾಯಸ್ಥರಿಗೆ ಏನು ಕೊಡಬೇಕಾಗಿತ್ತು (ಇಬ್ರಿಯ 5:14)?

**2. ದೇವರ ವಾಕ್ಯದ ಹಾಲು ಮತ್ತು ಗಟ್ಟಿ ಪದಾರ್ಥವನ್ನು ಹಿರಿಯರು ಹೇಗೆ ಕೊಡುವರು (1 ಥೆಸಲೋನೀಕ 5:14, 15)?**

**3. ಹಿರಿಯರು ಯಾವಾಗ ಮಂದೆಯ "ರಕ್ತದಿಂದ ಶುದ್ಧರಾಗಿರುವರು" (ಅಪೊಸ್ತಲರ ಕೃತ್ಯಗಳು 20:26, 27)?**

a. ಹಿಂಜರಿಯದೇ ಅವರು ಏನನ್ನು ಹಿಡಿದುಕೊಳ್ಳಬೇಕು? ಹೇಗೆ (1 ತಿಮೊಥೆ 3:9)?

b. ಹಿರಿಯರಿಗೆ ಎಲ್ಲಾ ಬೋಧನೆಯನ್ನು ಮಾಡುವ ಅವಶ್ಯಕತೆ ಇರುವುದೋ (ಎಫೆಸ 4:11ಬಿ)?
ಹಾಗೆ ಮಾಡಲು ಅವರು ಯಶಸ್ವಿಯಾಗಿ, ಬುದ್ಧಿವಂತಿಕೆಯಿಂದ ಆಯ್ಕೆ ಮಾಡಬಾರದೆ?

c. ಯಾವ ಮೇಲ್ವಿಚಾರಣೆಯಲ್ಲಿ ಎಲ್ಲಾ ಪ್ರಸಂಗಿಸುವಿಕೆಯೂ ಬೋಧನೆಯು ಮಾಡಲ್ಪಡಬೇಕು?
ಸುವಾರ್ತಾ ಕೂಟಗಳನ್ನೂ ಸ್ಥಳಿಕ ಪ್ರಸಂಗಿಸುವಿಕೆಯನ್ನೂ ಯಾರು ನಡಿಸಬೇಕು?

d. ಸುವಾರ್ತಿಕನೂ ಸ್ಥಳಿಕ ಪ್ರಸಂಗಿಯೂ ಏನನ್ನು ಪ್ರಸಂಗಿಸ ಬೇಕು (2 ತಿಮೊಥೆ 4:2)?
ಪ್ರಸಂಗಿಗಳೂ ಬೋಧಕರೂ ಏನು ಮಾಡಬೇಕೆಂಬುದನ್ನು ಹಿರಿಯರು ನೋಡಬೇಕು (ಅಪೊಸ್ತಲರ ಕೃತ್ಯಗಳು 20:27)?

**ದೇವರ ಮನೆಯ ಆಡಳಿತೆ**

**1. ಹಿರಿಯರು ಆಳುವವರೋ (1 ಥೆಸಲೋನೀಕ 5:12; 1 ತಿಮೊಥೆ 5:17)?**

a. ಅವರು ಯಾವುದರಿಂದ ಆಳಬೇಕು (ರೋಮಾಪುರ 12:8)? ಅವರು ಹೀಗೆ ಆಳಿದರೆ, ಅವರು ಎಲ್ಲಾ ಸೇವೆಗಳಲ್ಲಿ ಸರಿಯಾಗಿರುವರೋ?

b. ಅವರು ಹೇಗೆ ಆಳಬೇಕು (1 ತಿಮೊಥೆ 5:17)?

c. ಇಬ್ರಿಯ 13:7 ಅಧ್ಯಯನ ಮಾಡಿರಿ. ಅವರು ಏನನ್ನು ಮಾತಾಡುವದರಿಂದ ಆಳುವರು?

d. ಇಬ್ರಿಯ 13:7ರ ಕೊನೆಯ ಎರಡು ವಾಕ್ಯಭಾಗಗಳನ್ನು ಅಧ್ಯಯನ ಮಾಡಿರಿ. ಹಿರಿಯರು ಹೇಗೆ ಆಳಬಹುದು ಎಂಬುದನ್ನು ಅದು ಬೋಧಿಸುತ್ತದೆ?

e. c ಮತ್ತು d ಯಿಂದ ಅತೀ ಪರಿಣಾಮಕಾರಿಯಾಗಿ ಹಿರಿಯರು ಹೇಗೆ ಆಳಬಹುದು?

**ಅನುಭವಿಕ ಹಿರಿಯನ ಪ್ರಬೋಧನೆ**

**1. ಯಜಮಾನನ ಸೇವೆಯಲ್ಲಿ ಅಷ್ಟು ಅನುಭವ ಹೊಂದಿದವನು ಯಾರು (1 ಪೇತ್ರ 1:1; 5:1)?**

**2. ಜೊತೆ ಹಿರಿಯರಿಗೆ ಅವನು ಯಾಕೆ ಪ್ರಬೋಧನೆ ಮಾಡಬೇಕು (1 ಪೇತ್ರ 5:1)?**

**3. ಮೇಲ್ವಿಚಾರಣೆಯು ಹೇಗೆ ಮಾಡಲ್ಪಡಬಾರದು (1 ಪೇತ್ರ 5:2ಬಿ, 3ಎ)? ಯಾವ ಮೂರು ಸಂಗತಿಗಳು ಮಾಡಲ್ಪಡಬಾರದು?**

**4. ಹೇಗೆ ಮೇಲ್ವಿಚಾರಣೆಯು ಮಾಡಲ್ಪಡಬೇಕು (1 ಪೇತ್ರ 4:2ಎ, 3ಬಿ)?**

ಈ ಮೇಲ್ವಿಚಾರಣೆ ಮಾಡಲ್ಪಡುವಾಗ ಎಷ್ಟು ಸಂಗತಿಗಳು ಮಾಡಲ್ಪಡುತ್ತವೆ (1 ಪೇತ್ರ 5:2ಎ, 3ಬಿ)?

a. "ಮೇಲ್ವಿಚಾರಣೆ ಮಾಡುವದರ" ಒತ್ತಡ ಯಾವುದು? ಹಿರಿಯರು ಸಭೆಯ ಎಲ್ಲಾ ಚಟುವಟಿಕೆಗಳ ಮೇಲೆ ಇರಬೇಕೋ?
b. ಅವರು ಎಲ್ಲಾ ಕೆಲಸಗಳನ್ನು ಮಾಡಬೇಕೋ ಅಥವಾ ಅದು ಜಾಣ್ಮೆಯಿಂದ ಮಾಡಲ್ಪಡುವಂತೆ ನೋಡಿಕೊಳ್ಳಬೇಕೋ?
c. ಎಲ್ಲಾ ಬೋಧಕರಿಂದ ಅವರು ಏನನ್ನು ಕೇಳುತ್ತಾರೆ (1 ತಿಮೊಥೆ 4:12)? ಯಾವುದು ಪ್ರತ್ಯಕ್ಷವಾಗಿರಬೇಕು (ತೀತ 2:7b, 8)?

**5. ನಂಬಿಗಸ್ತ ಹಿರಿಯರ ಬಹುಮಾನ ಏನಾಗಿರುವುದು (1 ಪೇತ್ರ 5:4)?**

© 2009 Truth for Today